

# ಕುಟುಂಬದೊಳಗಿನ ಚಿನ್ನದ ಸೂಜಿ!

ದಾಂಪತ್ಯವೆಂಬ ಕೆಂಡವನ್ನೂ ಹೂವನ್ನೂ ಒಟ್ಟೊಟ್ಟಿಗೇ ಇಟ್ಟುಕೊಂಡಿರುವ ವ್ಯವಸ್ಥೆಯ ಕುರಿತು ಬಹುಸೂಕ್ಷ್ಮವಾಗಿ ಅಷ್ಟೇ ಸಶಕ್ತವಾಗಿ ಮಾತಾಡುವ ಕಿರುಚಿತ್ರ ‘ಮಿಸ್ಟರ್ ಆ್ಯಂಡ್ ಮಿಸ್ಟರ್ಸ್’.

ಈ ಶೀರ್ಷಿಕೆಯಲ್ಲಿಯೇ ಒಂದು ರೀತಿಯ ವಕ್ರತೆ ಇದೆ, ನಾಜೂಕಾದ ವ್ಯಂಗ್ಯವಿದೆ. ಆ ನಾಜೂಕು ವ್ಯಂಗ್ಯ ಮತ್ತು ಅದರ ಹಿಂದಿನ ಅಸೂಯೆ ಮತ್ತು ಮನಸೊಳಗಿನ ಕ್ರೌರ್ಯವೇ ಈ ಕಿರುಚಿತ್ರದ ಕೇಂದ್ರವೂ ಹೌದು. ಹಾಗಾಗಿಯೇ ಈ ಶೀರ್ಷಿಕೆ ಕಿರುಚಿತ್ರಕ್ಕೆ ಬೇರೆಯೇ ಬೆಳಕನ್ನು ದಯಪಾಲಿಸಿದೆ.

ನಾವು ‘ಮೇಡ್ ಫಾರ್ ಈಚ್ ಅದರ್ಸ್’ ಎಂದು ಹೇಳುವ ಎಲ್ಲ ಲಕ್ಷಣಗಳೂ ಕಾಣುವ ಹಾಗಿದೆ ಅವರ ದಾಂಪತ್ಯ. ಪರಸ್ಪರ ಹೊಂದಾಣಿಕೆ, ಕಾಲೆಳೆದುಕೊಳ್ಳುವ ಗುಣ, ಧ್ವನಿ ಏರಿಸದೆಯೇ ಚುಚ್ಚಿಕೊಳ್ಳುವ ಹರಿತ ಮಾತುಗಳು, ಬಹುಸೂಕ್ಷ್ಮವಾಗಿ ನಾನು ನಿನ್ನನ್ನು ಸಹಿಸಿಕೊಂಡು ಬದುಕಿದ್ದೇನೆ ಎನ್ನುವ ಭಾವ ಎಲ್ಲವೂ ಅಲ್ಲಿದೆ.

ಅಂದು ಆ ಮನೆಗೆ ಒಬ್ಬ ಅತಿಥಿ ಬರಲಿದ್ದಾನೆ. ಆ ಅತಿಥಿ ಹೆಂಡತಿಯ ಕಡೆಯವನು. ಚಿಕ್ಕ ವಯಸ್ಸಿನಲ್ಲಿ ಹೆಂಡತಿಗೂ ಅವನಿಗೂ ನಡುವೆ ಕ್ರಶ್ ಎನ್ನಬಹುದಾದಂಥ ಸಂಬಂಧವಿತ್ತು ಎಂಬುದೂ ಗಂಡನಿಗೆ ಗೊತ್ತು. ಆದರೆ ಅಂಥ ಸಂಬಂಧವನ್ನೂ ಮುಕ್ತವಾಗಿ ಗಂಡನೊಂದಿಗೆ ಹಂಚಿಕೊಂಡಿರುವ, ಆ ಕಾರಣದಿಂದಲೇ ಅದರಿಂದ ದಾಟಿಕೊಂಡು ಬದುಕುತ್ತಿರುವ ಹೆಂಡತಿಯ ಎದುರಿಗೆ ಆಕ್ಷೇಪವೆತ್ತಿದರೆತಾನುಸಣ್ಣವನಾಗಿಬಿಡುತ್ತೀನೇನೋ ಎಂಬ ಆತಂಕ ಗಂಡನಿಗಿದೆ. ಆದರೆ ಮನಸ್ಸು ಕ್ಷುದ್ರ. ಅದರ ಆಲೋಚನೆಗಳು, ಹುಟ್ಟುಹಾಕುವ ಅಸೂಯೆಯೂ ಅಷ್ಟೇ ಕ್ಷುದ್ರ. ಆದರೆ ಆ ಒಳಗಿನ ವಿಷವನ್ನು ಹೊರಗೆ ಕಾರಿಕೊಂಡು ಸಣ್ಣವನಾಗಲು ಅವನಿಗೆ ಇಷ್ಟವಿಲ್ಲ. ಹಾಗಾಗಿ ನಯದ ಮಾತಲ್ಲೇ, ತಮಾಷೆಯ ಮುಖವಾಡದಲ್ಲೇ ಹೆಂಡತಿಯನ್ನು ತಿವಿಯಲು ಯತ್ನಿಸುತ್ತಾನೆ. ತನಗೂ ಹಿಂದೊಮ್ಮೆ ಒಂದು ಹುಡುಗಿಯ ಮೇಲೆ ಕ್ರಶ್ ಆಗಿತ್ತು ಎಂದು ಹೇಳಿಕೊಳ್ಳುತ್ತಾನೆ. ಅದಕ್ಕೆ ಹೆಂಡತಿ ವಿಚಲಿತಳಾಗಿಲ್ಲ, ಕೆರಳಿಲ್ಲ ಎಂಬುದು ಗೊತ್ತಾದಾಗ ನೇರವಾಗಿ, ‘ನಿನಗೆ ಈಗಲೂ ಅವನ ಮೇಲೆ ಪ್ರೀತಿ ಇದೆ ಅಲ್ಲವೇ?’ ಎಂದೂ ಕೇಳುತ್ತಾನೆ.

ಹೆಂಡತಿ ಬರುವ ಅತಿಥಿಗೆ ಇಷ್ಟವಾದ ಪಾಯಸ ಮಾಡುವ ಸಿದ್ಧತೆಯಲ್ಲಿರುವಾಗ, ‘ಆ ಪಾಯಸದಲ್ಲಿ ವಿಷ ಹಾಕಿಕೊಟ್ಟರೂ ಅವನು ಕುಡಿಯುತ್ತಾನಾ?’ ಎಂದು ಸಹಜಮಾತಿನ ಟೋನಿನಲ್ಲೇ ಕೇಳುತ್ತಾನೆ. ಅದಕ್ಕವಳು ಅಷ್ಟೇ ಸಹಜವಾಗಿ ‘ಹೌದು. ಕುಡಿಯುತ್ತಾನೆ’ ಎನ್ನುತ್ತಾಳೆ. ‘ಹಾಗಾದರೆ ನಿನಗೆ ಇನ್ನೂ ಅವನ ಮೇಲೆ ಪ್ರೀತಿ ಇಲ್ಲ ಎಂದು ಪ್ರೂವ್ ಮಾಡು. ನಾನು ಪಾಯಸದಲ್ಲಿ ವಿಷ ಬೆರೆಸುತ್ತೇನೆ. ನೀನು ತಡೆಯಬಾರದು’ ಎಂದು ಸವಾಲು ಹಾಕುತ್ತಾನೆ. ಅವಳೂ ‘ನಿನಗೆ ಆ ಧೈರ್ಯ ಇಲ್ಲ’ ಎಂದು ಹೇಳುತ್ತಲೇ ಒಪ್ಪಿಕೊಳ್ಳುತ್ತಾಳೆ.

ಮನೆಗೆ ಬಂದ ಅತಿಥಿಗೆ ಪಾಯಸದಲ್ಲಿ ವಿಷ ಹಾಕಲು ನಿರ್ಧರಿಸಿದ ಗಂಡ, ಅದರ ಅರಿವಿಲ್ಲದೆ ಕೂತ ಅತಿಥಿ. ಗಂಡ ನಿಜಕ್ಕೂ ವಿಷ ಹಾಕಿದ್ದಾನೆಯೇ ಎಂಬ ಭಯದಲ್ಲಿ ತೊಳಲಾಟದಲ್ಲಿರುವ ಹೆಂಡತಿ ಈ ಮೂರು ಬಿಂದುಗಳ ನಡುವೆ ಈ ಕಿರುಚಿತ್ರ ಹೊಯ್ದಾಡುತ್ತದೆ. ಆ ಹೊಯ್ದಾಟದಲ್ಲಿ ಕುಟುಂಬದ ಕ್ರೌರ್ಯ, ನಂಬಿಕೆ, ಮುಗ್ಧತೆ, ತಲ್ಲಣ ಎಲ್ಲವೂ ವ್ಯಕ್ತವಾಗುತ್ತದೆ. ಮತ್ತದು ಎಲ್ಲೂ ವಾಚ್ಯವಾಗುವುದಿಲ್ಲ ಎನ್ನುವುದು ಈ ಕಿರುಚಿತ್ರದ ವಿಶೇಷ. ಅತಿಥಿ ಒಂದು ಸ್ಪೂನ್ ಪಾಯಸವನ್ನು ಬಾಯಿಗೆ ಹಾಕಿಕೊಳ್ಳುವ ಮೂಲಕವೇ ಕಿರುಚಿತ್ರ ಕೊನೆಗೊಳ್ಳುತ್ತದೆ. ಗಂಡ ಅದಕ್ಕೆ ವಿಷ ಬೆರೆಸಿದ್ದಾನಾ? ಅತಿಥಿ ಸಾವನ್ನಪ್ಪಿದನಾ ಎಂಬ ಪ್ರಶ್ನೆಯನ್ನು ನಿರ್ದೇಶಕರು ನೋಡುಗರಿಗೆ ಬಿಡುತ್ತಾರೆ. ಅಥವಾ, ಅದು ಈ ಕಥೆಗೆ ಅಷ್ಟು ಮುಖ್ಯವಲ್ಲ. ಅದಕ್ಕೂ ಮೊದಲಿನ ತೊಳಲಾಟಗಳು, ಸಂಶಯ, ತನ್ನ ನಿಷ್ಠೆಯನ್ನು ಸಾಬೀತುಗೊಳಿಸಬೇಕಾದ ಅನಿವಾರ್ಯತೆಯ ಸಂಕಟಗಳೇ ಮುಖ್ಯವಾಗಿವೆ. ಹಾಗಾಗಿಯೇ ಇದು ಮನಸ್ಸಿಗೆ ತಟ್ಟುತ್ತದೆ. ಮನಸ್ಸಲ್ಲಿ ಉಳಿಯುತ್ತದೆ.

ಹೆಸರು: ಮಿಸ್ಟರ್ ಆ್ಯಂಡ್ ಮಿಸ್ಟರ್ಸ್
ಭಾಷೆ: ಹಿಂದಿ
ನಿರ್ಮಾಣ/ನಿರ್ದೇಶನ: ಅಬುಲ್ ಹಸನ್ ಜಿಯಾ
ಧ್ವನಿ ವಿನ್ಯಾಸ: ಸಕ್ಷನ್ ಪಾಂಡೆ
ಛಾಯಾಗ್ರಹಣ: ಸತ್ಯೇಂದ್ರ ಶ್ರೀವಾಸ್ತವ
ತಾರಾಗಣ: ಸೌಮ್ಯಾ ಚಾವ್ಲಾ, ಹರ್ಷವರ್ಧನ್ ಸಿಂಗ್, ಬಸಂತ್ ಕುಮಾರ್

■ ಗೌರಿ

ಕಿರುಚಿತ್ರ ವೀಕ್ಷಣೆಗೆ https://bit.ly/3IL7dyd ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.